| ಕರ್ನಾಟಕ ವಿಧಾನ ಪರಿಷತ್ತು | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 43 (33) |
| ಮಾನ್ಯ ಸದಸ್ಯರ ಹೆಸರು | ಶ್ರೀ ಐವನ್ ಡಿ' ಸೋಜಾ (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 08-12-2025 |
| ಉತ್ತರಿಸಬೇಕಾದ ಸಚಿವರು | ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ನಗರದ ಮೂಡಶೆಡ್ಡೆಯಲ್ಲಿ ಸರ್ಕಾರಿ ಆಸ್ಪತ್ರೆಗೆ ಮೀಸಲಿಟ್ಟ ಸ್ಥಳದಲ್ಲಿ ಜಯದೇವ ಹೃದಯ ರೋಗ ಸಂಸ್ಥೆಯ ಒಂದು ಮಾದರಿ ಸ್ಯಾಟ್ಲೈಟ್ ಸೆಂಟರ್ ಮತ್ತು ಕಿದ್ವಾಯಿ ಕಲಬುರಗಿ ಮಾದರಿಯಲ್ಲಿ ಪ್ರಾರಂಭಿಸಬೇಕೆಂಬ ಜನರ ಬೇಡಿಕೆ ಇದ್ದು, ಇದನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು; (ವಿವರ ನೀಡುವುದು) | ಮಂಗಳೂರು ನಗರದ ಮೂಡಶೆಡ್ಡೆಯಲ್ಲಿ ಸರ್ಕಾರಿ ಆಸ್ಪತ್ರೆಗೆ ಮೀಸಲಿಟ್ಟ ಸ್ಥಳದಲ್ಲಿ ಜಯದೇವ ಹೃದಯ ರೋಗ ಸಂಸ್ಥೆಯ ಒಂದು ಮಾದರಿ ಸ್ಯಾಟ್ ಲೈಟ್ ಸೆಂಟರ್ ಮತ್ತು ಕಿದ್ವಾಯಿ ಕಲಬುರಗಿ ಮಾದರಿಯಲ್ಲಿ ಪ್ರಾರಂಭಿಸುವ ಕುರಿತು ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| ಆ) | ರಾಜ್ಯದ 10 ಜಿಲ್ಲೆಗಳಿಂದ ರೋಗಿಗಳು ಮಂಗಳೂರಿನ ಪ್ರಸ್ತುತ ಸರ್ಕಾರಿ ವೆನ್‌ಲಾಕ್ ಆಸ್ಪತ್ರೆಗೆ ಆಗಮಿಸುತ್ತಿದ್ದು, ಮೇಲಿನ ಸೆಂಟರ್‌ಗಳು ಪ್ರಾರಂಭಿಸಿದ್ದಲ್ಲಿ ಜನರ ಅನೇಕ ವರ್ಷಗಳ ಬೇಡಿಕೆ ಈಡೇರಿಸಲು ಸರ್ಕಾರ ಈಗಲಾದರೂ ಕ್ರಮ ಕೈಗೊಳ್ಳುವುದೇ; | |
| ಇ) | ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರಿ ವೆನ್‌ಲಾಕ್ ಆಸ್ಪತ್ರೆಯಲ್ಲಿ ಪ್ರಸ್ತುತ ಈ ಸೌಲಭ್ಯ ಇಲ್ಲದೆ ಇತರೆ ಖಾಸಗಿ ಆಸ್ಪತ್ರೆಗೆ ವರ್ಗಾಯಿಸುತ್ತಿರುವ ರೋಗಿಗಳ ಸಂಖ್ಯೆ ಎಷ್ಟು; ಇದಕ್ಕೆ ತಗಲುವ ವೆಚ್ಚ ಎಷ್ಟು; (ವಿವರ ನೀಡುವುದು) | ವೆನ್ ಲಾಕ್ ಜಿಲ್ಲಾ ಆಸ್ಪತ್ರೆಯಲ್ಲಿ ದಿನಾಂಕ:21.09.2025ರಂದು ಕ್ಯಾಥ್ ಲ್ಯಾಬ್ ಪ್ರಾರಂಭಿಸಲಾಗಿದ್ದು, ವೈದ್ಯಕೀಯ ಉಪಕರಣಗಳು, ವೈದ್ಯರು, ಸಿಬ್ಬಂದಿಗಳನ್ನು ಕೆ.ಎಂ.ಸಿ. ವತಿಯಿಂದ ಒದಗಿಸಲಾಗಿದ್ದು, ಸರಕಾರದ ವತಿಯಿಂದ ಔಷಧ ಮತ್ತು ಪರಿಕರಗಳನ್ನು ಒದಗಿಸಲಾಗುತ್ತದೆ. ಆಸ್ಪತ್ರೆಯಲ್ಲಿ ಈಗಾಗಲೇ 232 (Angiogram, Angioplasty) ಹೃದಯ ಸಂಬಂಧಿ ಖಾಯಿಲೆಗಳಿಗೆ ಚಿಕಿತ್ಸೆಯನ್ನು ನೀಡಲಾಗಿರುತ್ತದೆ.<br><br>ಫೆಬ್ರುವರಿ 2025ರಿಂದ ನವೆಂಬರ್ 2025ರವರೆಗೆ ಹೃದಯ ಸಂಬಂಧಿ ಖಾಯಿಲೆಗಳಿಗೆ ಬೇರೆ ಆಸ್ಪತ್ರೆಗಳಿಗೆ ರೆಫರ್ ಮಾಡಿದ ರೋಗಿಗಳ ಸಂಖ್ಯೆ -928 |

| | | |
|---|---|---|
| | | ಕ್ಯಾಥ್‌ಲ್ಯಾಬ್ ಪ್ರಾರಂಭಿಸಲಾದ ನಂತರ ಕಾರ್ಡಿಯಾಕ್ ಸರ್ಜರಿಗೆ ಬೇರೆ ಆಸ್ಪತ್ರೆಗೆ ರೆಫರ್ ಮಾಡಿರುವ ರೋಗಿಗಳ ಸಂಖ್ಯೆ-72<br><br>ವೆನ್ ಲಾಕ್ ಆಸ್ಪತ್ರೆಯಲ್ಲಿ ಕೆ.ಎಂ.ಸಿ ವತಿಯಿಂದ ಜೂನ್ 2025ನೇ ತಿಂಗಳಿನಿಂದ Comprehensive cancer care unit ಪ್ರಾರಂಭಿಸಲಾಗಿದ್ದು, 12 ವೈದ್ಯರ ತಂಡದಿಂದ (Medical Oncology, Radiation oncology, Surgical oncology)ಅಕ್ಟೋಬರ್ 2025ನೇ ತಿಂಗಳಿನವರಿಗೆ ಡೇ ಕೇರ್ ಕಿಮೋಥೆರಪಿ ವಿಭಾಗದಲ್ಲಿ ಒಟ್ಟು 82 ಕೇಸ್‌ಗಳಿಗೆ ಚಿಕಿತ್ಸೆ ನೀಡಲಾಗಿರುತ್ತದೆ. Oncosurgeon ಒಬ್ಬರೇ ಇದ್ದು, ಇನ್ನೂ ಇಬ್ಬರೂ Oncosurgeon ಅವಶ್ಯಕತೆ ಇರುತ್ತದೆ.<br>ಜನವರಿ 2025 ರಿಂದ ನವೆಂಬರ್ 2025ರವರೆಗೆ ಹೊರರೋಗಿ ವಿಭಾಗದಲ್ಲಿ ಚಿಕಿತ್ಸೆ ನೀಡಿದ ರೋಗಿಗಳ ಸಂಖ್ಯೆ-2894<br>ಬೇರೆ ಆಸ್ಪತ್ರೆಗೆ ರೆಫರ್ ಮಾಡಿದ ರೋಗಿಗಳ ಸಂಖ್ಯೆ – 988<br><br>ರೋಗಿಯ ಖಾಯಿಲೆ, ಪರಿಸ್ಥಿತಿ ಹಾಗೂ ಔಷಧಿಗಳಿಗೆ ಅನುಗುಣವಾಗಿ ಒಂದು ರೋಗಿಯ ಚಿಕಿತ್ಸೆಗೆ ತಗಲುವ ಅಂದಾಜು ವೆಚ್ಚ ಈ ಕೆಳಗಿನಂತಿದೆ<br><br>ಹೃದಯ ಸಂಬಂಧಿ ಖಾಯಿಲೆಗಳಿಗೆ-ರೂ.1.5 ಲಕ್ಷದಿಂದ ರೂ.2.00ಲಕ್ಷ<br>Open heart surgery ಅಂದಾಜು –ರೂ.4.00 ಲಕ್ಷದಿಂದ ರೂ.5.00ಲಕ್ಷ<br>ರೇಡಿಯೇಷನ್ – ಅಂದಾಜು ರೂ.75,000 ರಿಂದ ರೂ.1.5ಲಕ್ಷ<br>ಹೆಚ್ಚಿನ ಗುಣಮಟ್ಟ ಅಂದಾಜು –ರೂ.2.00 ಲಕ್ಷ<br>ಕಿಮೋಥೆರಪಿ 5to 6 cycles ಅಂದಾಜು – ರೂ.50,000 ದಿಂದ ರೂ.1.00ಲಕ್ಷ |
| ಈ) | ರಾಜ್ಯದಲ್ಲಿ ಎಷ್ಟು ಕಡೆಗಳಲ್ಲಿ ಹೃದಯ ಮತ್ತು ಕ್ಯಾನ್ಸರ್ ಸ್ಯಾಟಲೇಟ್ ಸೆಂಟರ್ ಪ್ರಾರಂಭಿಸಿದೆ; ಇದಕ್ಕೆ ತಗಲಿದ ವೆಚ್ಚ ಎಷ್ಟು? | ಹೃದ್ರೋಗ ಚಿಕಿತ್ಸಾ ಕೇಂದ್ರಗಳ ವಿವರ:<br>ಕಲಬುರಗಿಯಲ್ಲಿ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಪ್ರಾದೇಶಿಕ ಹೃದ್ರೋಗ ಕೇಂದ್ರವನ್ನು ಅನುಮೋದಿತ ಮೊತ್ತ ರೂ.262.60ಕೋಟಿಗಳಲ್ಲಿ ಸ್ಥಾಪಿಸಲಾಗಿರುತ್ತದೆ.<br><br>ಮೈಸೂರಿನಲ್ಲಿ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಪ್ರಾದೇಶಿಕ ಹೃದ್ರೋಗ ಕೇಂದ್ರವನ್ನು ಅನುಮೋದಿತ ಮೊತ್ತ ರೂ.168.59ಕೋಟಿಗಳಲ್ಲಿ ಸ್ಥಾಪಿಸಲಾಗಿರುತ್ತದೆ.<br><br>ಹುಬ್ಬಳ್ಳಿಯಲ್ಲಿನ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯನ್ನು ರೂ.200.76ಕೋಟಿಗಳ ವೆಚ್ಚದಲ್ಲಿ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿರುತ್ತದೆ.<br><br>ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಡಿಯಾಕ್ ಯುನಿಟ್ ನ್ನು ಸ್ಥಾಪಿಸಿದ್ದು, ಹೃದಯ ಸಂಬಂಧಿ ಚಿಕಿತ್ಸೆಯನ್ನು ನೀಡಲಾಗುತ್ತಿದೆ. |

ಗದಗ್‌ನ ಕೆ.ಹೆಚ್. ಪಾಟೀಲ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಡಿಯಾಕ್ ಕ್ಯಾಥ್ಲಾಬ್ ಯುನಿಟ್ ಅನ್ನು ಸ್ಥಾಪಿಸಲಾಗಿದ್ದು, ಹೃದಯ ಸಂಬಂಧಿ ಚಿಕಿತ್ಸೆಯನ್ನು ನೀಡಲಾಗುತ್ತಿದೆ.

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕಾರ್ಡಿಯಾಕ್ ಯುನಿಟ್ ನ್ನು ಸ್ಥಾಪಿಸಿದ್ದು, ಹೃದಯ ಸಂಬಂಧಿ ಚಿಕಿತ್ಸೆಯನ್ನು ನೀಡಲಾಗುತ್ತಿದೆ.

ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಡಿಯಾಕ್ ಕ್ಯಾಥ್ ಲ್ಯಾಬ್ ಯುನಿಟ್ ಅನ್ನು ಸ್ಥಾಪಿಸಲಾಗಿದೆ.

ರಾಜ್ಯದಲ್ಲಿ ಪ್ರಸ್ತುತ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವತಿಯಿಂದ ಈ ಕೆಳಕಂಡ ಸ್ಯಾಟಲೇಟ್ ಸೆಂಟರ್‌ಗಳು ಕಾರ್ಯನಿರ್ವಹಿಸುತ್ತಿರುತ್ತವೆ.

ಇ.ಎಸ್.ಐ ರಾಜಾಜಿನಗರ- ಅಂದಾಜು ರೂ.12.00 ಕೋಟಿ.

ಕೆ.ಸಿ ಜನರಲ್ -ಮಲ್ಲೇಶ್ವರಂ, ಬೆಂಗಳೂರು-ರೂ.6.00 ಕೋಟಿ

ರಾಜ್ಯದಲ್ಲಿ ಎರಡು ಕಡೆಗಳಲ್ಲಿ ಹೃದಯ ಸ್ಯಾಟ್ ಲೈಟ್ ಸೆಂಟರ್ ಮತ್ತು 6 ಕಡೆಗಳಲ್ಲಿ ಕ್ಯಾನ್ಸರ್ ಪೆರಿಫರಲ್ ಸೆಂಟರ್ ಗಳನ್ನು ಪ್ರಾರಂಭಿಸಲಾಗಿದೆ. ಹೃದಯಕ್ಕೆ ಸಂಬಂಧಿಸಿದ ಸ್ಯಾಟ್ ಲೈಟ್ ಸೆಂಟರ್ ಗಳನ್ನು ಪ್ರಾರಂಭಿಸಲು ಆಯಾ ಪ್ರದೇಶ, ಒದಗಿಸಬಹುದಾದ ಉಪಕರಣ/ ಪೀಠೋಪಕರಣಗಳಿನುಸಾರವಾಗಿ ಮೊತ್ತವು ವ್ಯತ್ಯಯವಾಗುತ್ತಿದ್ದು, ಅಂದಾಜು ರೂ.12.00 ಕೋಟಿಗಳ ಅನುದಾನ ಉದ್ಭವಿಸಲಿದೆ ಹಾಗೆಯೇ 100 ಹಾಸಿಗೆ ಸಾಮರ್ಥ್ಯಕ್ಕೆ ಪೆರಿಫರಲ್ ಕ್ಯಾನ್ಸರ್ ಕೇಂದ್ರಗಳನ್ನು ಪ್ರಾರಂಭಿಸಲು ಅಂದಾಜು ರೂ.50.00 ಕೋಟಿಗಳ ಅನುದಾನ ಉದ್ಭವಿಸಲಿದೆ.

ಕ್ಯಾನ್ಸರ್ ಚಿಕಿತ್ಸಾ ಕೇಂದ್ರಗಳ ವಿವರ:

ಪಿಸಿಸಿ ಕಲ್ಬುರ್ಗಿ – ಕಿದ್ವಾಯಿ ಸಂಸ್ಥೆಯ ಅಂಗ ಸಂಸ್ಥೆಯು ಪಿಸಿಸಿ ಕಲ್ಬುರ್ಗಿಯಲ್ಲಿ 1991 ರಿಂದ ಕಾರ್ಯ ನಿರ್ವಹಿಸುತ್ತಿದೆ. ಪ್ರಸ್ತುತ ಪಿಸಿಸಿ ಕಲ್ಬುರ್ಗಿಯಲ್ಲಿ ಪೆಥಾಲಜಿ, ಮೆಡಿಕಲ್ ಆಂಕಾಲಜಿ, ಸರ್ಜಿಕಲ್ ಆಂಕಾಲಜಿ, ಕಿಮೋಥೆರಪಿ ಡೇ ಕೇರ್, ರೇಡಿಯೋಥೆರಪಿ ಚಿಕಿತ್ಸೆಗಳು ಲಭ್ಯವಿರುತ್ತದೆ.

ಪಿಸಿಸಿ ತುಮಕೂರು – 100 ಹಾಸಿಗೆಗಳ ಪೆರಿಫೆರಲ್ ಕ್ಯಾನ್ಸರ್ ಕೇಂದ್ರವನ್ನು ರೂ.60.00 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಅನುಮೋದನೆ ನೀಡಿದ್ದು, ಸಿವಿಲ್ ಕಾಮಗಾರಿ ಮುಕ್ತಾಯಗೊಂಡಿದ್ದು, ಕಮಿಷನಿಂಗ್ ಕಾರ್ಯವು ಪ್ರಗತಿಯಲ್ಲಿರುತ್ತದೆ.

| | | |
|---|---|---|
| | | ಪಿಸಿಸಿ ಮೈಸೂರು- 100 ಹಾಸಿಗೆಗಳ ಪೆರಿಫೆರಲ್ ಕ್ಯಾನ್ಸರ್ ಕೇಂದ್ರವನ್ನು ರೂ.50.00ಕೋಟಿ ವೆಚ್ಚದಲ್ಲಿ ನಿರ್ಮಿಸಲು ಅನುಮೋದನೆನೀಡಿದ್ದು, ಸಿವಿಲ್ ಕಾಮಗಾರಿ ಮುಕ್ತಾಯಗೊಂಡಿದ್ದು, ಕಮಿಷನಿಂಗ್ ಕಾರ್ಯವು ಪ್ರಗತಿಯಲ್ಲಿರುತ್ತದೆ.<br><br>ಪಿಸಿಸಿ ಶಿವಮೊಗ್ಗ - 100 ಹಾಸಿಗೆಗಳ ಪೆರಿಫೆರಲ್ ಕ್ಯಾನ್ಸರ್ ಕೇಂದ್ರವನ್ನು ರೂ.50.00 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಅನುಮೋದನೆ ನೀಡಿದ್ದು, ಕಟ್ಟಡ ನಿರ್ಮಾಣ ಕಾಮಗಾರಿ ಕೆಲಸಗಳು ಪ್ರಗತಿಯಲ್ಲಿರುತ್ತದೆ.<br><br>ಪಿಸಿಸಿ ಬೆಳಗಾವಿ – ಬೆಳಗಾವಿ ವೈದ್ಯಕೀಯ ವಿದ್ಯಾಲಯ ಆವರಣದಲ್ಲಿ 50 ಹಾಸಿಗೆಗಳ ಪೆರಿಫೆರಲ್ ಕ್ಯಾನ್ಸರ್ ಕೇಂದ್ರವನ್ನು ರೂ.50.00 ಕೋಟಿಗಳ ವೆಚ್ಚದಲ್ಲಿ ನಿರ್ಮಿಸಲು ಅನುಮೋದನೆಯಾಗಿದ್ದು, ರೂ.35.00ಕೋಟಿ ವೆಚ್ಚದಲ್ಲಿ ಕಾಮಗಾರಿ ಪ್ರಾರಂಭಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ.<br><br>ಪಿಸಿಸಿ ರಾಯಚೂರು-ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಆವರಣದಲ್ಲಿ ಪೆರಿಫೆರಲ್ ಕ್ಯಾನ್ಸರ್ ಕೇಂದ್ರವನ್ನು ರೂ.50.00 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಅನುಮೋದನೆಯಾಗಿದ್ದು. ಸದರಿ ಘಟಕದ ನಿರ್ಮಾಣ ಕಾಮಗಾರಿಯ ಟೆಂಡರ್‌ಗೆ ಇಟ್ಟ ಮೊತ್ತಕ್ಕಿಂತ ಶೇ4.41ರಷ್ಟು ಹೆಚ್ಚು ನಮೂದಿಸಿರುವ L1 ಗುತ್ತಿಗೆದಾರರಾದ M/s Srinivas Enterprises, Hyderabad ರವರ ಟೆಂಡರ್ ಮೊತ್ತವಾದ ರೂ.16,01,47,801/-(Exclusing GST & Including all other applicable taxes) ಗಳ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.<br><br>ಪಿಸಿಸಿ ಬೀದರ್ - ಬೀದರ್ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಯ ಆವರಣದಲ್ಲಿ ಸಿವಿಲ್ ಕಾಮಗಾರಿಗೆ ಅವಶ್ಯವಿರುವ ಒಟ್ಟಾರೆ ರೂ.36.00 ಕೋಟಿಗಳನ್ನು (KKRDB) ಯಿಂದ ಒದಗಿಲಾಗುವ ಅನುದಾನದಿಂದ ಭರಿಸತಕ್ಕದ್ದು ಎಂಬ ಷರತ್ತಿನೊಂದಿಗೆ ಪಿಸಿಸಿ ಕಟ್ಟಡವನ್ನು ಸ್ಥಾಪಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. |

**ಸಂ. ಎಂಇಡಿ 614 ಎಂಎಸ್‌ಎಫ್ 2025**

**(ಡಾ. ಶರಣ ಪ್ರಕಾಶ ಆರ್. ಪಾಟೀಲ)**
ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು
ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಹಾಗೂ ಜೀವನೋಪಾಯ
ಸಚಿವರು